**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಓ.ಎಸ್.ನಂ. 90/2013.**

**ಪಿ ಡಬ್ಲ್ಯೂಃ 3**

**ದಿನಾಂಕಃ 30-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿಯರ ಪರ ಶ್ರೀ ಬಿ.ಜಿ.ಆರ್ ವಕೀಲರಿಂದಃ**

ನಾವು ಲಂಬಾಣಿ ಜನಾಂಗಕ್ಕೆ ಸೇರಿರುತ್ತೇವೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯರು ಸಹ ಲಂಬಾಣಿ ಜನಾಂಗಕ್ಕೆ ಸೇರಿರುತ್ತಾರೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯರು ಸಂಬಂಧಿಕರು ಎಂದರೆ ಸರಿ. ನಮ್ಮ ಅಡ್ಡಹೆಸರು ಬಣಕಾರ ಎಂತಲೂ ಸಹ ಇದ್ದು ನನ್ನ ಅಜ್ಜ ಶಿಡೇನೂರು ಗ್ರಾಮದಲ್ಲಿ ಬಣಕಾರಕಿಯನ್ನು ಮಾಡುತ್ತಿದ್ದರು. ನಾನು ಶೀಡೇನೂರು ಗ್ರಾಮದಲ್ಲಿ ಖಾಯಂ ಆಗಿ ವಾಸವಾಗಿದ್ದೇನೆ ಎಂದರೆ ಸಾಕ್ಷಿ ಕಲ್ಲೇದೇವರು ಗ್ರಾಮದಲ್ಲಿ ವಾಸವಾಗಿದ್ದೇನೆ ಎನ್ನುತ್ತಾರೆ. ಕಲ್ಲೇದೇವರು ಗ್ರಾಮದಲ್ಲಿ ನಾವು ನಮ್ಮ ಅಜ್ಜ ಗೇಮಪ್ಪ ರವರ ಮನೆಯಲ್ಲಿ ಇದ್ದೆವು. ಸದರಿ ಗೇಮಪ್ಪ ರವರ ಮನೆಯ ಆಸ್ತಿ ನಂಬರ್ ನನಗೆ ಹೇಳಲು ಬರುವುದಿಲ್ಲ. ಸದರಿ ಆಸ್ತಿ ಮನೆ ಇರುತ್ತದೆ. ಸದರಿ ಮನೆಗೆ ಸಂಬಂದಿಸಿದಂತೆ ನಾನು ಸದರಿ ಗೇಮಪ್ಪರವರು ತೀರಿಕೊಂಡ ನಂತರ ಕಂದಾಯವನ್ನು ಪಾವತಿಸಿಲ್ಲ. ನಾನು ಚಿಕ್ಕವನಿದ್ದಾಗಿನಿಂದಲೂ ಸದರಿ ಕಲ್ಲೇದೇವರು ಗ್ರಾಮದಲ್ಲಿ ವಾಸವಾಗಿದ್ದೆ ಹಾಗೂ ಕಲ್ಲೇದೇವರು ಗ್ರಾಮದಿಂದ ಶಿಡೆನೂರು ಗ್ರಾಮಕ್ಕೆ ಹೋಗಿಯೂ ಸಹ ಬರುತ್ತಿದ್ದೆ ಎನ್ನುತ್ತಾರೆ. ನಾನು ಕಲ್ಲೇದೇವರು ಗ್ರಾಮದಲ್ಲಿ ಖಾಯಂ ಆಗಿ ವಾಸವಾಗಿದ್ದೆ ಹಾಗೂ ಶಿಡೆನೂರು ಗ್ರಾಮಕ್ಕೆ ಆಗಾಗ ಹೋಗಿ ಬರುತ್ತಿದ್ದೆ.

02. ಶಿಡೆನೂರು ಗ್ರಾಮದಲ್ಲಿ ನನ್ನ ತಂದೆಯ ಜಮೀನು ಹಾಗೂ ಮನೆ ಇದೆ. ಸದರಿ ಜಮೀನನ್ನು ನನ್ನ ತಂದೆಯ ಜೀವಿತಾವಧಿಯಲ್ಲಿ ನನ್ನತಂದೆ ಸಾಗು ಮಾಡುತ್ತಿದ್ದು ನನ್ನ ತಂದೆಯ ಮರಣದ ನಂತರ ನನ್ನ ಅಣ್ಣ ಸಾಗುವಳಿ ಮಾಡುತ್ತಿದ್ದಾನೆ. ನನ್ನ ತಂದೆ 3-4 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಶಿಡೆನೂರು ಗ್ರಾಮದ ನಮ್ಮ ಆಸ್ತಿಯನ್ನು ನನ್ನ ತಂದೆಯ ಜೀವಿತಾವಧಿಯಲ್ಲಿ ನಾನು ವಹಿವಾಟು ಮಾಡಿಲ್ಲ. ಸದರಿ ಆಸ್ತಿಗಳ ಪಹಣಿಯಲ್ಲಿ ನನ್ನ ಹೆಸರು ಇದೆ. ಸದರಿ ಜಮೀನು 2 ಎಕರೆ ಇದೆ.ನಾನು ಕಲ್ಲೇದೇವರು ಗ್ರಾಮದಲ್ಲಿ ಯಾವತ್ತೂ ವಾಸವಾಗಿಲ್ಲ ಎಂದರೆ ಸರಿಯಲ್ಲ ಹಾಗೂ ಕಲ್ಲೇದೇವರು ಗ್ರಾಮಕ್ಕೆ ನಾನು ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ಕಲ್ಲೇದೇವರು ಗ್ರಾಮಕ್ಕೆ ಸೇವಾನಗರ ಎಂತಲೂ ಕರೆಯುತ್ತಾರೆ. ಸದರಿ ಸೇವಾನಗರ ಎಂದು ಯಾವಾಗಿನಿಂದ ಯಾವ ಕಾರಣಕ್ಕೆ ಕರೆಯಲು ಪ್ರಾರಂಭಿಸಿದರು ಎಂದು ನನಗೆ ಗೊತ್ತಿಲ್ಲ. ಸದರಿ ಗ್ರಾಮದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸೇವಾನಗರ ಯಾವಾಗಿನಿಂದ ಕರೆಯಲು ಪ್ರಾರಂಭಿಸಿದರು ಎಂದು ಮಾತ್ರ ಗೊತ್ತಿಲ್ಲ ಉಳಿದರ ಬಗ್ಗೆ ಗೊತ್ತಿದೆ ಎನ್ನುತ್ತಾರೆ.

03. ಮೂಲ ಪುರುಷ ರಾಮಪ್ಪ ಲಮಾಣಿ ರವರ ಮಗ ಗೇಮಪ್ಪ ಎಂಬ ಹೆಸರಿನ ಒಬ್ಬರೇ ಇರುತ್ತಾರೆ. ಸದರಿ ಗೇಮಪ್ಪರವರ ಮೊದಲನೇಯ ಮಗಳು ದ್ಯಾಮವ್ವ ಇದ್ದು ಅವಳ ಗಂಡನ ಹೆಸರು ತಾವರೆಪ್ಪ ಎಂದರೆ ಸರಿ. ಸದರಿ ತಾವರೆಪ್ಪರವರಿಗೆ 2 ಜನ ಹೆಂಡತಿಯರು ಎಂದರೆ ಸರಿ. ಸದರಿ ತಾವರೆಪ್ಪ ರವರ ಮೊದಲನೆಯ ಹೆಂಡತಿ ದ್ಯಾಮವ್ವ ಆಗಿದ್ದು ಆತನ ಎರಡನೇಯ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಸದರಿ ತಾವರೆಪ್ಪ ಆತನ ಮೊದಲನೆಯ ಹೆಂಡತಿ ದ್ಯಾವವ್ವ ತೀರಿಕೊಂಡ ನಂತರ ಎರಡನೇಯ ಮದುವೆಯಾದ ಎಂದರೆ ಸರಿ. ಸದರಿ ತಾವರೆಪ್ಪರವರ ಎರಡನೇಯ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಸದರಿ 2 ನೇ ಹೆಂಡತಿಯ ಮಗ ಈರಪ್ಪ ಎಂದರೆ ಸರಿ. ಸದರಿ ಈರಪ್ಪ ಜೀವಂತ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತೀರಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಈರಪ್ಪನ ಹೆಂಡತಿ ಮಕ್ಕಳು ಜೀವಂತ ಇದ್ದಾರೆ. ಸದರಿ ಈರಪ್ಪನ ಹೆಂಡತಿ ಮಕ್ಕನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸರಿ.

04. ಸದರಿ ಗೇಮಪ್ಪರವರ 3ನೇ ಮಗಳು ಹನುಮವ್ವ ರವರ ಗಂಡ ಲೋಕೇಶ ಲಮಾಣಿ ಎಂದರೆ ಸರಿ. ಸದರಿ ಲೋಕೇಶ ರವರಿಗ 2 ಜನ ಹೆಂಡತಿಯರು. ಸದರಿ ಲೋಕೇಶರವರ ಮೊದಲನೆಯ ಹೆಂಡತಿ ಹನುಮವ್ವ. ಸದರಿ ಹನುಮವ್ವ ತೀರಿಕೊಂಡ ನಂತರ ಸದರಿ ಲೋಕೇಶರವರು 2ನೇಯ ಮದುವೆಯಾದರು ಎಂದರೆ ಸರಿ. ಸದರಿ ಲೋಕೇಶರವರ 2ನೇ ಹೆಂಡತಿಯ ಹೆಸರು ಮೀಟಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹನುಮವ್ವ ರವರಿಗೆ ಮೀಟಿಯಂತಲೂ ಕರೆಯುತ್ತಿದ್ದರು ಎನ್ನುತ್ತಾರೆ. ಲೋಕೇಶರವರ 2ನೇ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಪಿ.ಡಬ್ಲೂ.2 ಜಾನಪ್ಪ ಲಮಾಣಿರವರು ತಮ್ಮ ಸಾಕ್ಷ್ಯದಲ್ಲಿ ಸದರಿ ಲೋಕೇಶರವರಿಗೆ ಹನುಮವ್ವ ಹಾಗೂ ಮೀಟಿ ಎಂಬ 2 ಜನ ಹೆಂಡತಿಯರು ಇದ್ದರು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಲೋಕೇಶರವರು ಆತನ ಮೊದಲನೇಯ ಹೆಂಡತಿ ತೀರಿಕೊಂಡ ನಂತರ 2ನೇ ಮದುವೆ ಆದರು ಎಂರೆ ಸರಿ. ಸದರಿ ಲೋಕೇಶ ರವರ 2ನೇ ಹೆಂಡತಿಯ ಮಕ್ಕಳ ಹೆಸರು ಚಂದ್ರಪ್ಪ ಮತ್ತು ರಾಜಪ್ಪ ಎಂದರೆ ಸರಿ. ಸದರಿ ರಾಜಪ್ಪ ಮತ್ತು ಚಂದ್ರಪ್ಪ ಇವತ್ತಿಗೂ ಬದುಕಿರುತ್ತಾರೆ ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ಸದರಿ ಗೇಮಪ್ಪರವರ 1ನೇ ಹಾಗೂ 3ನೇ ಹೆಣ್ಣು ಮಕ್ಕಳ ಗಂಡಂದಿರಾದ ತಾವರೆಪ್ಪ ಮತ್ತು ಲೊಕೇಶರವರ ಅಣ್ಣ-ತಮ್ಮಂದಿರು ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

05. ಈ ದಾವೆಯಲ್ಲಿ ನಾನು ಹಾಜರು ಪಡಿಸಿದ ದಾಖಲೆಗಳ ಬಗ್ಗೆ ನನಗೆ ಗೊತ್ತಿದೆ. ಸದರಿ ದಾಖಲೆಗಳನ್ನು ನಾನೇ ತೆಗೆಯಿಸಿ ವಕೀಲರಿಗೆ ಕೊಟ್ಟಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ಈಗ ಸಾಕ್ಷಿಗೆ ನಿಪಿ-67 ಮೃತ್ಯು ಪತ್ರದ ಧೃಡಿಕೃತ ನಕಲನ್ನು ತೋರಿಸಿದ್ದು ಸದರಿ ದಾಖಲೆಯನ್ನು ನಾನೇ ನಮ್ಮ ವಕೀಲರಿಗೆ ತೆಗೆಯಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸದರಿ ನಿಪಿ-67 ಮೃತ್ಯು ಪತ್ರ ಇದ್ದ ಬಗ್ಗೆ ಈ ದಾವೆ ದಾಖಲಾದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ಸದರಿ ಮೃತ್ಯು ಪತ್ರವನ್ನು ನಾನು ನಮ್ಮ ವಕೀಲರಿಗೆ ತೆಗೆಯಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ್ತ್ಯು ಪತ್ರ ಇದ್ದ ಬಗ್ಗೆ ನನಗೆ ಯಾವ ಇಸವಿಯಲ್ಲಿ ಗೊತ್ತಾಯಿತು ಎಂದು

ನಿಖರವಾಗಿ ಇಸವಿ ಹೇಳಲು ಬರುವುದಿಲ್ಲ ಆದರೆ ಈ ದಾವೆ ದಾಖಲಾದ ನಂತರ ಗೊತ್ತಾಗಿರುತ್ತದೆ ಎನ್ನುತ್ತಾರೆ. ಸದರಿ ಮೃತ್ಯು ಪತ್ರ ಇದ್ದ ಬಗ್ಗೆ ನನಗೆ 4-5 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ.

06. 2 ಮತ್ತು 3 ನೇ ಪ್ರತಿವಾದಿಯರ ತಂದೆ ದೇವಪ್ಪರವರು ಸದರಿ ಗೇಮಪ್ಪರವರ ಮನೆಯಲ್ಲಿ ಬೆಳೆದು ದೊಡ್ಡವನಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಿಪಿ-67 ಮೃತ್ಯು ಪತ್ರದಲ್ಲಿ ದಿನಾಂಕಃ 14.02.1991 ಎಂದು ಬರೆದಿದೆ ಎಂದರೆ ಸರಿ. ಸದರಿ ದಿನಾಂಕದಂದು ನಾನು ಸೇವಾನಗರದಲ್ಲಿಯೇ ಇದ್ದೆ. ಸದರಿ ನನ್ನ ಅಜ್ಜ ಗೇಮಪ್ಪ ತನ್ನ ಸಹಿಯಾಗಿ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದ ಎಂದರೆ ಸರಿ. ಗೋಪಣ್ಣನ ಹೆಂಡತಿ ದ್ಯಾಮವ್ವ ಸಹ ತನ್ನ ಸಹಿಯಾಗಿ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನಮ್ಮ ವಾದ ಪತ್ರದ ವಂಶಾವಳಿಯಲ್ಲಿ ತೋರಿಸಿರುವ ಗೋಪಣ್ಣನ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಅಜ್ಜ ಗೇಮಪ್ಪ ಮೃತ್ಯು ಪತ್ರ ಮಾಡಿ ಎಷ್ಟು ತಿಂಗಳ ನಂತರ ತೀರಿಕೊಂಡ ಎಂದರೆ ಸಾಕ್ಷಿ ಹೆಚ್ಚು ಕಡಿಮೆ 1 ವರ್ಷದ ಒಳಗೆ ತೀರಿಕೊಂಡರು ಎನ್ನುತ್ತಾರೆ. ಸದರಿ ನನ್ನ ಅಜ್ಜ ಗೇಮಪ್ಪರವರು ವಯಸ್ಸಾಗಿದ್ದರಿಂದ ತೀರಿಕೊಂಡರು. ಸದರಿ ಗೇಮಪ್ಪ ರವರು ತೀರಿಕೊಳ್ಳುವ ಕಾಲಕ್ಕೆ ಪ್ರಜ್ಞಾವಂತರಾಗಿದ್ದರು ಎಂದರೆ ಸರಿಯಲ್ಲ. ಸದರಿ ಗೇಮಪ್ಪರವರಿಗೆ ಅವರು ತೀರಿಕೊಳ್ಳುವ 3 ವರ್ಷ ಮುಂಚೆಯಿಂದ ಸರಿಯಾಗಿ ಪ್ರಜ್ಞೆ ಇರುತ್ತಿರಲಿಲ್ಲ. ಸದರಿ ಗೇಮಪ್ಪರವರನ್ನು ನೀವು ಯಾವತ್ತಾದರೂ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಮೊದಲು ಇಲ್ಲ ಎಂದು ಆನಂತರ ಕೆಲವು ಬಾರಿ ಕರೆದುಕೊಂಡು ಹೋಗಿದ್ದೆ ಎನ್ನುತ್ತಾರೆ. ಸದರಿ ಗೇಮಪ್ಪರವರ ಆಗು-ಹೋಗುಗಳನ್ನು 2 ಮತ್ತು 3 ನೇ ಪ್ರತಿವಾದಿಯರ ತಂದೆ ದೇವಪ್ಪನೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

07. 1991 ನೇ ಸಾಲಿನಲ್ಲಿ ಕುಟುಂಬದ ಗಂಡು ಮಕ್ಕಳೇ ಕುಟುಂಬದ ಆಸ್ತಿಯನ್ನು ಅನುಭೋಗಿಸಬೇಕು ಎಂಬ ಪದ್ಧತಿ ಇತ್ತು ಎಂದರೆ ನನಗೆ ಗೊತ್ತಿಲ್ಲ.

ಆದ್ದರಿಂದ ಸದರಿ ಪದ್ಧತಿಯ ಕಾರಣದಿಂದ ಸದರಿ ಗೇಮಪ್ಪ ತನ್ನ ಹೆಣ್ಣು ಮಕ್ಕಳಿಗೆ ತನ್ನ ಆಸ್ತಿಗಳು ಹೋಗಬಾರದು ಹಾಗೂ ತನ್ನ ತಮ್ಮನ ಮಗ ದೇಮಪ್ಪನಿಗೆ ಆಸ್ತಿಗಳು ಹೋಗಬೇಕು ಎಂಬ ಕಾರಣದಿಂದ ಆತನ ಹೆಸರಿಗೆ ಮೃತ್ಯುಪತ್ರವನ್ನು ಬರೆದುಕೊಟ್ಟಿದ್ದ ಎಂದರೆ ಸರಿಯಲ್ಲ. ಸದರಿ ಗೇಮಪ್ಪ ದೇಮಪ್ಪನನ್ನು ಆತ ಚಿಕ್ಕವನಿದ್ದಾಗಿನಿಂದ ತನ್ನ ಮಗನಂತೆ ನೋಡಿಕೊಂಡು ತನ್ನ ಮನೆಯಲ್ಲಿಯೇ ಬೆಳೆಯಿಸಿದ್ದ ಎಂದರೆ ಸರಿ. ಸದರಿ ಗೇಮಪ್ಪನೇ ತನ್ನ ತಮ್ಮನ ಮಗನಾದ ದೇಮಪ್ಪನ ಹೆಸರಿನ ಮುಂದೆ ಸಾರ್ವಜನಿಕ ದಾಖಲೆಗಳಲ್ಲಿ ತನ್ನ ಹೆಸರನ್ನು ಆತನ ತಂದೆಯಂದು ಸೇರಿಸಿದ್ದ ಎಂದರೆ ಸಾಕ್ಷಿ ಆಸ್ತಿ ಕಬಳಿಸುವ ಉದ್ದೇಶದಿಂದ ದೇಮಪ್ಪ ಆ ರೀತಿ ಮಾಡಿಕೊಂಡಿದ್ದ ಎನ್ನುತ್ತಾರೆ. ಸದರಿ ಆ ಬಗ್ಗೆ ಗೇಮಪ್ಪನ ಹೆಸರು ಖೊಟ್ಟಿ ರೀತಿಯಿಂದ ತನ್ನ ತಂದೆ ಎಂದು ದೇಮಪ್ಪ ಸೇರಿಸಿಕೊಂಡ ಬಗ್ಗೆ ನನಗೆ ಈ ದಾವೆ ದಾಖಲಾದ ನಂತರ ಗೊತ್ತಾಗಿರುತ್ತದೆ. ಸದರಿ ಖೊಟ್ಟಿ ದಾಖಲೆ ಸೃಷ್ಟಿಸಿದ ಬಗ್ಗೆ ನನಗೆ ಗೊತ್ತಾದ ನಂತರ ನಾನು ಸಂಬಂಧಿಸಿದ ಪ್ರಾಧಿಕಾರಕ್ಕೆ ದೂರು ನೀಡಿಲ್ಲ.

08. ನನ್ನ ಅಜ್ಜ ಗೇಮಪ್ಪನಿಗೆ ದಾವಾ ಆಸ್ತಿಗಳು ಬಿಟ್ಟು ಬೇರೆ ಆಸ್ತಿಗಳು ಇವೆ. ಸಾಕ್ಷಿ ಮುಂದುವರೆದು ಸರ್ವೆ ನಂ.130/11 ಗೇಮಪ್ಪ ಹಾಗೂ ಇತರರ ಜಂಟಿ ಹೆಸರಿನಲ್ಲಿ ಇರುತ್ತದೆ ಎನ್ನುತ್ತಾರೆ. ಸದರಿ ಗೇಮಪ್ಪ ಹಾಗೂ ಆತನ ಸಹೋದರರಾದ ಬಾಬಣ್ಣ, ಸೋಮಣ್ಣ, ಪೀರಪ್ಪ ರವರ ಹೆಸರಿನಲ್ಲಿ ಸದರಿ ಜಮೀನು ಇದೆ. ಸದರಿ ಗೇಮಪ್ಪನ ವಾರಸುದಾರರು ನಾವು ಎಂದು ಹೇಳಿ ಸದರಿ ಜಮೀನಿನ ದಾಖಲೆಗಳಿಗೆ ನಮ್ಮ ಹೆಸರನ್ನು ದಾಖಲಿಸಲು ನಾನು ಸಂಬಂಧಪಟ್ಟ ಕಂದಾಯ ಇಲಾಖೆಗೆ ಈವರೆಗೂ ಅರ್ಜಿ ಸಲ್ಲಿಸಿಲ್ಲ. ಸಾಕ್ಷಿ ಮುಂದುವರೆದು ಈ ದಾವೆ ನಿಖಾಲಿಯಾದ ನಂತರ ನೀಡುತ್ತೇವೆ ಎನ್ನುತ್ತಾರೆ. ಸದರಿ ಅರ್ಜಿ ಸಲ್ಲಿಸಿ ನಮ್ಮ ಹೆಸರನ್ನು ದಾಖಲಿಸಿಕೊಳ್ಳಲು ನಮಗೆ ತೊಂದರೆ ಇರಲಿಲ್ಲ. ಸದರಿ ಸರ್ವೆ ನಂ.130/11 ನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

09. ಗೇಮಪ್ಪರವರು ದೇಮಪ್ಪರವರ ಪರ ಬರೆದುಕೊಟ್ಟ ಮೃತ್ಯುಪತ್ರದಲ್ಲಿ 3 ಆಸ್ತಿಗಳು ಸೇರಿವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೃತ್ಯು ಪತ್ರವನ್ನು ನಾನು ಓದಿ

ನೋಡಿರುತ್ತೇನೆ. ಸದರಿ ಮೃತ್ಯುಪತ್ರವನ್ನು ನಾನು ಈಗ 2 ವರ್ಷಗಳ ಹಿಂದೆ ನೋಡಿರುತ್ತೇನೆ. ಕಲ್ಲೋದೇವರು ಗ್ರಾಮ ಪಂಚಾಯತಿ ಆಸ್ತಿ ಸಂಖ್ಯೆ: 323/ಬಿ ಹಂಚಿನ ಮನೆ ಹಾಗೂ ಬೈಲು ಜಾಗ ನೇದ್ದಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿಲ್ಲ ಎಂದರೆ ಸರಿ. ಸದರಿ ಮೇಲೆ ಹೇಳಿದ ಪಂಚಾಯತಿ ಆಸ್ತಿ ಮನೆಯಲ್ಲಿ 2 ಮತ್ತು 3 ನೇ ಪ್ರತಿವಾದಿಯರು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಂಚಾಯತಿ ಆಸ್ತಿ ಸಂಖ್ಯೆ: 323/ಬಿ ಹಂಚಿನ ಮನೆ ಹಾಗೂ ಬೈಲು ಜಾಗ ಈಗ ಯಾರ ಹೆಸರಿನಲ್ಲಿ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ಆಸ್ತಿಯಲ್ಲಿ 2 ಮತ್ತು 3 ನೇ ಪ್ರತಿವಾದಿಯರೇ ವಾಸವಾಗಿದ್ದರೂ ಸಹ ವಾಸವಾಗಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ನಾನು ನನ್ನ ಅಜ್ಜ ಗೇಮಪ್ಪರವರ ಮನೆಯಲ್ಲಿ ಇದ್ದೆ ಎನ್ನುವ ಕಾಲಕ್ಕೆ ನನ್ನ ತಾಯಿಯ ಸಹೋದರಿಯರು ಸದರಿ ಗೇಮಪ್ಪರವರ ಮನೆಗೆ ಬಂದು ಹೋಗುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಸದರಿಯವರು ಅವರ ಮದುವೆಯಾದ 6 ತಿಂಗಳು - 1 ವರ್ಷದ ಒಳಗೆ ತೀರಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಗೇಮಪ್ಪರವರ ಮನೆಗೆ ಸದರಿ ನನ್ನ ತಾಯಿಯ ಸಹೋದರಿಯವರು ಅವರು ಮದುವೆಯಾದ ನಂತರ ಬಂದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಗಾಗ ಬಂದು ಹೋಗುತ್ತಿದ್ದರು ಎನ್ನುತ್ತಾರೆ. ಸದರಿ ನನ್ನ ತಾಯಿಯ ಸಹೋದರಿಯರು ಗೇಮಪ್ಪರವರ ಮನೆಗೆ ಬಂದು ಹೋಗುತ್ತಿದ್ದ ಕಾಲಕ್ಕೆ ನಾನು 5-6 ವರ್ಷದವನಾಗಿದ್ದೆ.

11. ಗೇಮಪ್ಪರವರ 2 ನೇ ಮಗಳಾದ ಹೇಮವ್ವರವರ ಮಕ್ಕಳು ನಾನು ಹಾಗೂ 1 ನೇ ವಾದಿ. ದಾವಾ ಸ್ವತ್ತುಗಳು ದೇಮಪ್ಪನ ಹೆಸರಿಗೆ ದಾಖಲಾದ ಬಗ್ಗೆ ನಮಗೆ 2011 ನೇ ಸಾಲಿನಲ್ಲಿ ಗೊತ್ತಾಗಿರುತ್ತದೆ. ಸದರಿ ದೇಮಪ್ಪನ ಹೆಸರು ಎಂ.ಆರ್.ನಂ.33/2010-11 ರ ಆಧಾರದ ಮೇಲೆ ದಾವಾ ಸ್ವತ್ತುಗಳಿಗೆ ದಾಖಲಾದದ್ದು ನನಗೆ 2011 ನೇ ಸಾಲಿನಲ್ಲಿ ಗೊತ್ತಾಗಿರುತ್ತದೆ ಎಂದರೆ ಸರಿ. ಸದರಿ ಎಂ.ಆರ್.ನಂ.33/2010-11 ನ್ನು ನಾನು ಈ ವರೆಗೂ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ. ಆನಂತರ ಸದರಿ ದೇಮಪ್ಪ ದಾವಾ ಸ್ವತ್ತುಗಳನ್ನು ತನ್ನ ಮಕ್ಕಳಾದ 2

ಮತ್ತು 3 ನೇ ಪ್ರತಿವಾದಿಯರಿಗೆ ವಾಟ್ನಿ ಮಾಡಿ ಕೊಟ್ಟಿದ್ದು ಸದರಿ 2 ಮತ್ತು 3 ನೇ ಪ್ರತಿವಾದಿಯರ ಹೆಸರು ಎಂ.ಆರ್.ನಂ.58/2011-12 ರ ಅನ್ವಯ ದಾಖಲಾದದ್ದು ನನಗೆ 2011 ನೇ ಸಾಲಿನಲ್ಲಿ ಗೊತ್ತಾಗಿರುತ್ತದೆ ಎಂದರೆ ಸರಿ. ಸದರಿ ಎಂ.ಆರ್.ನಂ.58/2011-12 ನ್ನು ನಾನು ಈ ವರೆಗೂ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ. ಸದರಿ ದೇಮಪ್ಪ ಹಾಗೂ 2 ಮತ್ತು 3 ನೇ ಪ್ರತಿವಾದಿಯರು 2004-05 ನೇ ಸಾಲಿನಲ್ಲಿ ರೂ.4,00,000/- ಗಳನ್ನು ದಾವಾ ಸ್ವತ್ತುಗಳ ಮೇಲೆ ಸೇವಾನಗರ ಸೊಸೈಟಿ ಹಾಗೂ ಬ್ಯಾಡಗಿಯ ಸಿಂಡಿಕೇಟ್ ಬ್ಯಾಂಕಿನಲ್ಲಿ ಸಾಲ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಸ್ವತ್ತುಗಳ ಕಬ್ಜಾ ವಹಿವಟಿಯಲ್ಲಿ ನಾನು ಇದ್ದೇನೆ ಎಂದು ಹೇಳಿದ್ದು ಸದರಿ ದಾವಾ ಸ್ವತ್ತುಗಳ ಮೇಲೆ ಸಾಲ ಪಡೆಯಬೇಕು ಎಂದು ನನಗೆ ಯಾವತ್ತೂ ಅನಿಸಿಲ್ಲ. ದಾವಾ ಸ್ವತ್ತುಗಳು ಯಾರ ಹೆಸರಿನಲ್ಲಿವೆ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುತ್ತೇನೆ. ದಾವಾ ಸ್ವತ್ತುಗಳು ದೇಮಪ್ಪರವರ ಹೆಸರಿನಲ್ಲಿ ದಾಖಲಾದ ಬಗ್ಗೆ ನನಗೆ ಗೊತ್ತಾದ ನಂತರ ದಾಖಲೆಗಳನ್ನು ತೆಗೆಯಿಸಿ ನೋಡಿರುತ್ತೇವೆ ಎನ್ನುತ್ತಾರೆ. ಸದರಿ ದೇಮಪ್ಪರವರ ಹೆಸರಿಗೆ ದಾವಾ ಸ್ವತ್ತುಗಳು ದಾಖಲಾಗುವ ಕಾಲಕ್ಕೆ ನನಗೆ ಗೊತ್ತಾಗಿದೆ ಎಂದರೆ ಸರಿ. ಈ ದಾವೆ ಕಾಲಪರಿಮಿತಿ ವ್ಯಾಪ್ತಿಯಲ್ಲಿ ಬರದೇ ಇರುವುದರಿಂದ ಈ ದಾವೆ ವಜಾಗೊಳ್ಳಲು ಅರ್ಹವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ದೇಮಪ್ಪರವರ ಹೆಸರಿಗೆ ದಾಖಲಾದ ನಂತರ ಅವುಗಳನ್ನು ಪೋಡಿ ಸಹ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

12. ದಾವಾ ಸ್ವತ್ತುಗಳ ಬೆಲೆ ಗಗನಕ್ಕೇರಿದೆ ಎಂದರೆ ಸರಿ. ಈ ದಾವೆ ದಾಖಲಿಸುವ ಕಾಲಕ್ಕೆ ದಾವಾ ಸ್ವತ್ತುಗಳ ಬೆಲೆ ಎಕರೆಗೆ 10-12 ಲಕ್ಷ ಇತ್ತು. ನಿಪಿ-26 ರ ಪ್ರಕಾರ ಸರ್ವೆ ನಂ.145/4 ಕ್ಕೆ ಹೊಸ ಸರ್ವೆ ನಂಬರ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕಂದಾಯ ಪಾವತಿಸಿದ ರಶೀದಿ ನನ್ನ ಬಳಿ ಇಲ್ಲ. ಸದರಿ ಕಂದಾಯವನ್ನು ನಾನು ಪಾವತಿಸಿರುತ್ತೇನೆ ಆದರೆ ರಶೀದಿ ನನ್ನ ಬಳಿ ಇಲ್ಲ. ಸದರಿ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕಂದಾಯವನ್ನು ದೇಮಪ್ಪರವರೇ ಕಟ್ಟಿದ್ದು ಅವು ನಿಡಿ-21 ರಿಂದ 29 ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.